(ಲಕ್ಷ ರೂ.ಗಳಲ್ಲಿ)

ವರ್ಷ	ಗುಲ್ಬರ್ಗಾ	ಬೀದರ್	ಬಳ್ಳಾರಿ	ರಾಯಚೂರು	ಒಟ್ಟು ಮೊತ್ತ
1990–91	1394.54	1712.80	988.83	913.37	5009.54
1991–92	1997.49	756.62	1071.28	1133.47	4958.86
1992–93	1514.40	424.64	858.64	1031.22	3828.90

ಆ) ಕಾರ್ಯಕ್ರಮಗಳಿಗೆ ವಲಯವಾರು ಖರ್ಚು ಮಾಡಿದ ಹಣದ ವಿವರ

(ಲಕ್ಷ ರೂ.ಗಳಲ್ಲಿ)

ವಲಯ	ಮೊತ್ತ
1. ರಸ್ತೆ ಮತ್ತು ಸೇತುವೆಗಳು	2440.13
2. ದೊಡ್ಡ ಹಾಗೂ ಮಧ್ಯಮ ನೀರಾವರಿ	539.26
3. ಸಣ್ಣ ನೀರಾವರಿ	522.77
4. ಶಿಕ್ಷಣ	1944.79
5. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್	3698.68
6. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	1979.47
7. ಆರೋಗ್ಯ	591.13
8. ಸಹಕಾರ	960.00
9. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ	1069.38
10. ಯುವಜನ ಸೇವೆ	50.00
11. ಸಮಾಜ ಕಲ್ಯಾಣ	1.77
ಒಟ್ಟು	13797.30

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಿಂಡಿ ಅಣೆಕಟ್ಟುಗಳ ಸಂಖ್ಯೆ

1225 (1439): ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ):–

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ಅಧೀನದಲ್ಲಿ ಬರುವ ಕಿಂಡಿ ಅಣೆಕಟ್ಟುಗಳೆಷ್ಟು;

ಆ) ಆ ಪೈಕಿ ದುರಸ್ತಿಯಾಗಿ ನಿಷ್ಪ್ರಯೋಜಕವಾಗಿರುವ ಕಿಂಡಿ ಅಣೆಕಟ್ಟುಗಳು ಎಷ್ಟು;

ಇ) ಇಷ್ಟೊಂದು ಸಂಖ್ಯೆ ಅಣೆಕಟ್ಟುಗಳ ದುರಸ್ತಿಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಈ) ಕಿಂಡಿ ಅಣೆಕಟ್ಟುಗಳ ರಚನಾ ವಿನ್ಯಾಸದಲ್ಲಿರುವ ದೋಷವು ಈ ಕಿಂಡಿ ಅಣೆಕಟ್ಟುಗಳು ಉಪಯೋಗಕ್ಕೆ ಬಾರದಿರಲು ಕಾರಣವಾಗಿರುವುದನ್ನು ಸರ್ಕಾರ ಪರಿಶೀಲಿಸಿದೆಯೇ ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಸಣ್ಣ ನೀರಾವರಿ ಇಲಾಖೆಯ ಅಧೀನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನ ಕಡಪು ಕರಿಯ ಎಂಬಲ್ಲಿ ಒಂದು ಕಿಂಡಿ ಅಣೆಕಟ್ಟು ಇರುತ್ತದೆ ಮತ್ತು 43 ಕಿಂಡಿ ಅಣೆಕಟ್ಟುಗಳನ್ನು

ದಿನಾಂಕ 31–12–92ರಂದು ಜಿಲ್ಲಾಪರಿಷತ್ ವ್ಯಾಪ್ತಿಯಿಂದ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸಲಾಗಿದೆ.

ಆ) ಯಾವುದೂ ಇಲ್ಲ.

ಇ) ಉಡುಪಿ ತಾಲ್ಲೂಕಿನ ಕಡಪು ಕರಿಯ ಎಂಬಲ್ಲಿ ಕಿಂಡಿ ಅಣೆಕಟ್ಟು ಇದ್ದು ಈ ಕಿಂಡಿ ಅಣೆಕಟ್ಟು ನವೆಂಬರ್ 1992ರ ಚಂಡಮಾರುತದಿಂದ ಸ್ವಲ್ಪ ಹಾಳಾಗಿದ್ದು ಇದರ ದುರಸ್ತಿ ಕಾರ್ಯವನ್ನು ಕೈಗೊಂಡಿದ್ದು ಪ್ರಗತಿಯಲ್ಲಿರುತ್ತದೆ. ಜಿಲ್ಲಾಪರಿಷತ್ತಿನಿಂದ ವರ್ಗಾಯಿಸಿರುವ 43 ಕಿಂಡಿ ಅಣೆಕಟ್ಟುಗಳ ದುರಸ್ತಿ ಬಗ್ಗೆ ಸ್ಥಳ ಪರಿವೀಕ್ಷಣೆ ನಡೆಸಿ, ಅಗತ್ಯವಿದ್ದಲ್ಲಿ ಅನುದಾನದ ಲಭ್ಯತೆಯ ಮೇರೆಗೆ ದುರಸ್ತಿ ಕಾರ್ಯಕೈಗೊಳ್ಳಲಾಗುವುದು.

ಈ) ವಿನ್ಯಾಸದಲ್ಲಿ ದೋಷಗಳು ಇರುವುದಿಲ್ಲ.

ಅಧ್ಯಕ್ಷರು:– ಸಭೆಯ ಮುಂದೆ ಇಡಲಾಯಿತು. ಪ್ರಶ್ನೋತ್ತರ ಕಾಲ ಮುಗಿಯಿತು.

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೇ, ಹಿರೇಕೆರೂರು ತಾಲ್ಲೂಕು ಮಾಸೂರು ಗ್ರಾಮದ ಟಿ..ಪಿ.ಸಿ.ಎಂ.ಎಸ್.ನಲ್ಲಿ ಸಕ್ಕರೆ ಅಕ್ರಮ ಮಾರಾಟ ಪತ್ತೆ ಹಾಗೂ ಮಂಡಲ ಪಂಚಾಯತಿಯಲ್ಲಿಟ್ಟ ಸಕ್ಕರೆ ನಾಪತ್ತೆಯ ಬಗ್ಗೆ 10ನೇ ತಾರೀಖು ಪ್ರಸ್ತಾಪ ಮಾಡಿದ್ದೆ. ಮಂತ್ರಿಗಳು ಹೇಳಿಕೆ ಕೊಡುತ್ತೇನೆಂದು ಹೇಳಿದ್ದರು. ಆದ್ದರಿಂದ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರಿಂದ ಹೇಳಿಕೆ ಕೊಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಸಚಿವರಿಂದ ಹೇಳಿಕೆ

ಹಿರೇಕೆರೂರು ತಾಲ್ಲೂಕು ಮಾಸೂರು ಗ್ರಾಮದ ಟಎಪಿಸಿಎಂಎಸ್‌ನಲ್ಲಿ ಸಕ್ಕರೆ ಅಕ್ರಮ ಮಾರಾಟ ಪತ್ತೆ ಹಾಗೂ ಮಂಡಲ ಪಂಚಾಯತಿಯಲ್ಲಿಟ್ಟ ಹಿಡಿದ ಸಕ್ಕರೆ ನಾಪತ್ತೆ

†ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):– ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 10–3–1993ರಂದು ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಈಶ್ವರಪ್ಪನವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಚಾರದಲ್ಲಿ ಸಂಬಂಧಿಸಿದ ಅಧಿಕಾರಿಗಳಿಂದ ದೂರವಾಣಿ ಮೂಲಕ ಅದೇ ದಿನ ತುರ್ತು ಸಂದೇಶ ಪಡೆದು ಉತ್ತರ ನೀಡಿ, ವಿವರವಾದ ವರದಿಯನ್ನು ಪಡೆದು ಪುನಃ ಈ ಸದನದಲ್ಲಿ ಹೇಳಿಕೆ ನೀಡುವುದಾಗಿ ತಿಳಿಸಲಾಗಿತ್ತು.

ಅದರಂತೆ ಅದೇ ದಿನ ಎಂದರೆ 10–3–1993ರಂದೇ ಧಾರವಾಡ ಜಿಲ್ಲಾಧಿಕಾರಿಗಳನ್ನು ಹಿರೇಕೆರೂರು ತಾಲ್ಲೂಕು ಮಾಸೂರು ಗ್ರಾಮಕ್ಕೆ ಕಳಿಸಿ ತನಿಖೆ ನಡೆಸಿ ವಿವರಗಳನ್ನು ಪಡೆಯಲಾಗಿದೆ.

ಈ ತನಿಖೆಯಿಂದ ತಿಳಿದು ಬಂದಿರುವ ವಿಚಾರಗಳೆಂದರೆ:–

1. ದಿನಾಂಕ 5–3–1993ರಂದು 3 ಕ್ವಿಂಟಾಲ್ ಸಕ್ಕರೆಯನ್ನು ಮಾಸೂರಿನಲ್ಲಿ ಗ್ರಾಮಸ್ಥರು ತಮ್ಮ ವಶಕ್ಕೆ ಪಡೆದು, ಅದನ್ನು ಅದೇ ಗ್ರಾಮದ ಮಂಡಲ ಪಂಚಾಯತಿಯ ವಶಕ್ಕೆ ನೀಡಿದ್ದರು.
2. ಅದೇ ದಿನ ಎಂದರೆ 5–3–1993ರಂದು ರಾತ್ರಿ 9.00 ಗಂಟೆಯ ಸುಮಾರಿಗೆ ಮೂರು ಕ್ವಿಂಟಾಲ್ ಸಕ್ಕರೆಯು ಕಳ್ಳತನವಾಗಿದೆ.